ಆರ್‌ಐಡಿಎಫ್ 10ರ ಯೋಜನೆಯ ಅಡಿಯಲ್ಲಿ ಈಗ ಗ್ರಾಮೀಣ ಸಂತೆಗಳನ್ನು ಹೇಗೆ ತೆಗೆದುಕೊಂಡಿದ್ದಾರೆ, ಅದೇ ರೀತಿ ಗ್ರಾಮೀಣ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಒಂದು ವಿಚಾರ ನಾವು ಇಟ್ಟುಕೊಂಡು ಅದನ್ನು ಮಾಡುತ್ತಿದ್ದೇವೆ, ಅವರನ್ನು ಕರೆದು ಅವರು ಏನು ಸಲಹೆ ಕೊಡುತ್ತಾರೆ ಆ ಪ್ರಕಾರ ನಾವು ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರೇ ತಮ್ಮ ಪ್ರಶ್ನೆಯನ್ನು ಕೇಳಿ. ದಯಮಾಡಿ ಎಲ್ಲರೂ ಸಹಕರಿಸಬೇಕು, ಈಗ ಏಳು ಪ್ರಶ್ನೆ ಮುಗಿದಿವೆ ಇನ್ನು ಉಳಿದ ಪ್ರಶ್ನೆಗಳು ಮುಗಿದಿಲ್ಲ. ಈಗ ಕೇವಲ 20 ನಿಮಿಷಗಳು ಮಾತ್ರ ಇವೆ ಉಳಿದ ಪ್ರಶ್ನೆಗಳನ್ನು ಹಾಗೆಯೇ ಬಿಟ್ಟು ಬಿಡುವುದಾ? ದಯಮಾಡಿ ಕುಳಿತುಕೊಳ್ಳಿ, This is not the way. ದಯಮಾಡಿ ಕುಳಿತುಕೊಳ್ಳಬೇಕು.

ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಬಿಸಿಯೂಟದ ಜೊತೆ ಹಾಲು ನೀಡುವ ಬಗ್ಗೆ

23 (79) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲಾ ಹಾಲು ಒಕ್ಕೂಟಗಳಿಂದ ಪ್ರತಿದಿನ ಉತ್ಪಾದನೆಯಾಗುವ ಹಾಲಿನ ಪ್ರಮಾಣವೆಷ್ಟು;

ಆ) ಪ್ರತಿದಿನ ಸರಾಸರಿ ಇರತಕ್ಕ ಬೇಡಿಕೆ ಎಷ್ಟು;

ಇ) ಉತ್ಪಾದನೆಯಾಗುವ ಅಧಿಕ ಹಾಲನ್ನು ಯಾವರೀತಿ ವಿತರಣೆ ಮಾಡಲಾಗುತ್ತದೆ;

ಈ) ರಾಜ್ಯಕ್ಕೆ ಪ್ರತಿದಿನ ಬೇರೆ ರಾಜ್ಯಗಳಿಂದ ಬರತಕ್ಕ ಹಾಲಿನ ಪ್ರಮಾಣವೆಷ್ಟು;

ಉ) ಬೇರೆ ರಾಜ್ಯಗಳಿಂದ ಬರತಕ್ಕ ಹಾಲಿನ ಪ್ರಮಾಣವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಊ) ರಾಜ್ಯದಲ್ಲಿ ಅಧಿಕ ಹಾಲನ್ನು ಸದುಪಯೋಗಪಡಿಸಿಕೊಳ್ಳಲು ಹೊಸದಾಗಿ ಹಾಲಿನ ಪುಡಿ ತಯಾರಿಕಾ ಘಟಕಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಋ) ರಾಜ್ಯದಲ್ಲಿ ಪ್ರಾಥಮಿಕ ಶಾಲೆ ಮಕ್ಕಳಿಗೆ ಬಿಸಿಯೂಟದ ಜತೆಗೆ ಹಾಲನ್ನು ನೀಡಲು ಸರ್ಕಾರ ನಿರ್ಧರಿಸಿದೆಯೇ;

ಋೂ) ಹಾಗಿದ್ದಲ್ಲಿ ಇದಕ್ಕಾಗಿ ಬೇಕಾಗುವ ಹಾಲಿನ ಪ್ರಮಾಣವೆಷ್ಟು?

ಶ್ರೀ ಮುರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ರಾಜ್ಯದಲ್ಲಿ ಎಲ್ಲಾ ಹಾಲು ಒಕ್ಕೂಟಗಳಿಂದ ಜುಲೈ ಮೊದಲ ವಾರದಲ್ಲಿ ದಿನವಹಿ ಸರಾಸರಿ 27.75 ಲಕ್ಷ ಲೀಟರ್‌ಗಳಷ್ಟು ಹಾಲು ಉತ್ಪಾದನೆಯಾಗಿರುತ್ತದೆ.

ಆ) ಜುಲೈ ಮೊದಲ ವಾರದಲ್ಲಿ ಸರಾಸರಿ ದಿನವಹಿ 15.56 ಲಕ್ಷ ಲೀಟರ್ ಹಾಲು ಎಲ್ಲಾ ಹಾಲು ಒಕ್ಕೂಟಗಳ ಮುಖಾಂತರ ಮಾರಾಟವಾಗಿರುತ್ತದೆ.

ಇ) ದಿನವಹಿ 12.19 ಲಕ್ಷ ಲೀಟರ್ ಅಧಿಕ ಹಾಲು ಶೇಖರಣೆಯಾಗುತ್ತಿದ್ದು ಅದರ ವಿಲೇವಾರಿ ಈ ಕೆಳಕಂಡಂತೆ ಮಾಡಲಾಗಿರುತ್ತದೆ.

ಅ) ಮೊಸರು ಗುಡ್ ಲೈಫ್ ಮತ್ತು ಇತರೆ ಹಾಲು ಉತ್ಪನ್ನಗಳ ತಯಾರಿಕೆಗಾಗಿ:	ದಿನವಹಿ 1.50 ಲಕ್ಷ ಲೀಟರ್
ಆ) ಸಗಟು ರೂಪದಲ್ಲಿ ನೆರೆ ರಾಜ್ಯಗಳಿಗೆ ಹಾಲು ಮಾರಾಟ:	
1) ಮಾತೃ ಡೇರಿ, ದೆಹಲಿ	ದಿನವಹಿ 1.74 ಲಕ್ಷ ಲೀಟರ್
2) ಆಂಧ್ರಪ್ರದೇಶ ಹಾಲು ಮಹಾಮಂಡಳಿ,	ದಿನವಹಿ 0.90 ಲಕ್ಷ ಲೀಟರ್
3) ಗೋವಾ ಹಾಲು ಒಕ್ಕೂಟ	ದಿನವಹಿ 0.25 ಲಕ್ಷ ಲೀಟರ್
4) ಬೆಣ್ಣೆ ಹಾಗೂ ಹಾಲಿನ ಪುಡಿ ಪರಿವರ್ತನೆಗಾಗಿ.	ದಿನವಹಿ 7.80 ಲಕ್ಷ ಲೀಟರ್
	ಒಟ್ಟು 12.19 ಲಕ್ಷ ಲೀಟರ್

ಈ) ಜೂನ್ ಮಾಹೆಯಲ್ಲಿ ದಿನವಹಿ ಅಂದಾಜು ಸರಾಸರಿ 2.81 ಲಕ್ಷ ಲೀಟರ್ ಹಾಲು ಹೊರ ರಾಜ್ಯದಿಂದ ಕರ್ನಾಟಕ ರಾಜ್ಯಕ್ಕೆ ಬಂದಿರುತ್ತದೆ.

ಉ) ಕಾನೂನು ರೀತ್ಯಾ ಹೊರ ರಾಜ್ಯದಿಂದ ಬರುವ ಹಾಲನ್ನು ನಿಷೇಧಿಸಲು ಅವಕಾಶವಿಲ್ಲ. ಆದರೆ ಗುಣಮಟ್ಟ ತಪಾಸಣೆ ನಡೆಸಿ ಕಲಬೆರಕೆ ಹಾಲು ತಡೆಗಟ್ಟಲು ಸಂಬಂಧಪಟ್ಟ ಮಹಾನಗರಪಾಲಿಕೆ, ಪುರಸಭೆಗಳು, ಸೂಕ್ತ ಕ್ರಮ ಕೈಗೊಳ್ಳುತ್ತಿವೆ.

ಊ) ಅಧಿಕ ಹಾಲು ಸದುಪಯೋಗ ಪಡಿಸಿಕೊಳ್ಳಲು ಹೊಸದಾಗಿ ಹಾಲಿನ ಪುಡಿ ಘಟಕ ಪ್ರಾರಂಭಿಸಲು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಗೆ ಪತ್ರ ಬರೆಯಲಾಗಿದ್ದು ಶೀಘ್ರದಲ್ಲಿ ಹಾಲಿನ ಪುಡಿ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

ಋ) ಇಲ್ಲ.

ಋೂ) ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ಎಷ್ಟು ಹಣವನ್ನು ಈಗ ಒಕ್ಕೂಟಗಳಿಂದ ಕೊಡಬೇಕಾಗಿದೆ? ಇದನ್ನು ಯಾವಾಗ ಕೊಡಿಸುತ್ತೀರಾ? ಕರ್ನಾಟಕ ರಾಜ್ಯಾದಾದ್ಯಂತ ಏಕರೂಪ ದರವನ್ನು ತಾವು ಕೊಡುತ್ತಿಲ್ಲ. ಇದನ್ನು ಏತಕ್ಕೋಸ್ಕರ ಕೊಡುತ್ತಿಲ್ಲ? ಮತ್ತೆ ಏಕ ರೂಪದ ದರವನ್ನು ಕೊಡಿಸುವಂಥ ಪ್ರಯತ್ನವನ್ನು ತಾವು ಮಾಡುತ್ತೀರಾ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು): ಮಾನ್ಯ ಅಧ್ಯಕ್ಷರೆ, ಹಾಲು ಮಾರಾಟ ಮಾಡತಕ್ಕಂಥ ಸೊಸೈಟಿಗಳಿಂದ ಹಾಲು ಉತ್ಪಾದಕರಿಗೆ ಇನ್ನೂ ಸಂದಾಯವಾಗಿಲ್ಲವೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಈ ಹಣವನ್ನು ಯಾವಾಗ ಕೊಡಿಸುತ್ತೀರೆಂದು ಮತ್ತು ರಾಜ್ಯಾದಾದ್ಯಂತ ಏಕ ರೂಪದ ದರವನ್ನು ನಿಗದಿ ಮಾಡಬೇಕೆಂದು ಕೇಳಿದ್ದಾರೆ. ದರ ನಿಗದಿ ಮಾಡತಕ್ಕಂಥದ್ದು ಆಯಾಯ ಒಕ್ಕೂಟಕ್ಕೆ ಬಿಟ್ಟಂಥ ವಿಷಯವಾಗಿದೆ.

ಅಂದರೆ, ಆಯಾಯ ಒಕ್ಕೂಟಗಳಲ್ಲಿ ಆಗತಕ್ಕಂಥ ಪ್ರೊಡಕ್ಷನ್ ಮತ್ತು ಮಾರಾಟ ನೋಡಿಕೊಂಡು ಅಲ್ಲಿರತಕ್ಕಂಥ ಬೋರ್ಡ್ ದರ ನಿಗದಿ ಮಾಡುವುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ. ಮೊನ್ನೆದಿವಸ ಒಂದು ಲೀಟರ್‌ಗೆ ಸುಮಾರು 30 ರಿಂದ 40 ಪೈಸೆ ಕಡಿಮೆ ಮಾಡಿದ್ದಾರೆ. ಆದರೆ, ಗುಲ್ಬರ್ಗ ಹಾಲಿನ ಒಕ್ಕೂಟದಲ್ಲಿ ಒಂದು ಲೀಟರ್‌ಗೆ 30 ಪೈಸೆ ಜಾಸ್ತಿ ಮಾಡಿದ್ದಾರೆ. ಹಾಲು ಉತ್ಪಾದನೆಯಾಗುವ ಕಡೆಯಿಂದ ಮಾರಾಟ ಮಾಡುವ ಕಡೆಗೆ ಸಾಗಾಣಿಕೆ ಮಾಡಿರುವುದರಿಂದ ಬೆಂಗಳೂರಿನ ಕೆ.ಎಂ.ಎಫ್.ಗೆ ಸುಮಾರು 10 ರಿಂದ 15 ಲಕ್ಷ ರೂಪಾಯಿ ಲಾಸ್ ಆಗುತ್ತಿದೆ. ಈಗೇನು ಪರ್ಮನೆಂಟ್ ಆಗಿ ದರವನ್ನು ಕಡಿಮೆ ಮಾಡಿಲ್ಲ. ಇದು ಕೇವಲ ಟೈಂ ಬೀಯಿಂಗ್ ಆಗಿದೆಯಷ್ಟೆ. ಮತ್ತೆ ಮಾರ್ಕೆಟ್ ಯಾವರೀತಿ ಇರುತ್ತದೆಯೋ ಆ ಪ್ರಕಾರ ಮತ್ತೆ ದರ ನಿಗದಿ ಮಾಡತಕ್ಕಂಥ ತೀರ್ಮಾನವನ್ನು ಸಂಬಂಧಪಟ್ಟಂಥ ಯೂನಿಯನ್‌ರವರು ತೆಗೆದುಕೊಳ್ಳುತ್ತಾರೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥದ್ದನ್ನು ತಾವು ಹೇಳಬೇಕು. ಇವತ್ತಿನದಿವಸ ಬರಗಾಲ ಬಂದು ರೈತರೆಲ್ಲರೂ ಸಾಯುತ್ತಿದ್ದಾರೆ. ಹಾಲಿನ ಉತ್ಪಾದಕರಿಗೆ ಒಕ್ಕೂಟದವರು ದರ ನಿಗದಿ ಮಾಡಿ ಕೊಡುತ್ತಾರೆಂದು ತಾವು ಕಣ್ಣು ಮುಚ್ಚಿಕೊಂಡಿದ್ದರೆ ಹೇಗೆ? ಯಾರು ಹಾಲು ಉತ್ಪಾದನೆ ಮಾಡುತ್ತಾರೆಯೋ ಅವರಿಗೆ ಹಣ ಕೊಡುವುದು ಬೇಡವೆ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂಥ ಪ್ರಶ್ನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಲ್ಲಿ ಎಲ್ಲರೂ ನಿಂತುಕೊಂಡು ಪ್ರಶ್ನೆ ಕೇಳಿದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾವು ಪ್ರಶ್ನೆಯನ್ನು ಕೇಳಿದ್ದೆವು. ಆದರೆ ನಮ್ಮ ದುರಾದೃಷ್ಟವೇನೋ ನಮ್ಮ ಪ್ರಶ್ನೆ ಬಂದಿಲ್ಲ.

ಅಧ್ಯಕ್ಷರು : ಬೇರೆಯವರೂ ಕೂಡ ಮೂರು ಪ್ರಶ್ನೆಗಳನ್ನು ಕೇಳಬೇಕೆಂದು ನಿಂತುಕೊಳ್ಳುತ್ತಾರೆ. ಈ ರೀತಿಯಾದರೆ ಏನು ಮಾಡಬೇಕೆಂದು ತಾವು ದಯಮಾಡಿ ನನಗೆ ಗೈಡ್ ಮಾಡಿ. ಪ್ರಶ್ನೋತ್ತರ ವೇಳೆ ಒಂದು ಗಂಟೆ ಅವಧಿಯಲ್ಲಿ ಮುಗಿಯಬೇಕು.

ಶ್ರೀ ಅರಗಜ್ಞಾನೇಂದ್ರ : ರೈತರಿಗೆ ಸಂಬಂಧಪಟ್ಟಂಥ ಪ್ರಶ್ನೆ.

ಅಧ್ಯಕ್ಷರು : ಇದನ್ನು ನಾನು ಮತ್ತು ಎಲ್ಲರೂ ಸಹ ಒಪ್ಪಿಕೊಳ್ಳುತ್ತಾರೆ.

ಶ್ರೀ ಅರಗಜ್ಞಾನೇಂದ್ರ : ತಾವೆಲ್ಲಾ ರೈತರ ಪರವಾಗಿರುವಂಥವರು. ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು : ಎಲ್ಲರೂ ರೈತರ ಪರವಾಗಿರುವವರೇ ಈ ಸದನದಲ್ಲಿ ಯಾರು ರೈತರ ಪರವಾಗಿಲ್ಲ ಎಂಬುದನ್ನು ನೀವೇ ಹೇಳಿ? ಎಲ್ಲರೂ ರೈತ ಪರವಾಗಿರುವವರೇ ಆದರೆ, ನಿಗದಿತ ಅವಧಿಯಲ್ಲಿ ನಾನು ಪ್ರಶ್ನೋತ್ತರಗಳನ್ನು ಮುಗಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಹಾಲನ್ನು ಚರಂಡಿಗೆ ಚೆಲ್ಲುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಸಚಿವರು ಮೇಲ್ಮೇಲೆ ಉತ್ತರ ಕೊಟ್ಟರೆ ಆಗುವುದಿಲ್ಲ. ಈ ವಿಷಯವನ್ನು ಸರ್ಕಾರ ಬಹಳ ಸೀರಿಯಸ್ ಆಗಿ ಪರಿಗಣಿಸಬೇಕು. ಹಾಲು ಉತ್ಪಾದಕರಿಗೆ ಒಂದು ಲೀಟರ್ ಹಾಲಿಗೆ ಕೇವಲ 8.50 ರೂಪಾಯಿ ಕೊಡುತ್ತಿದ್ದಾರೆ. ಆದರೆ 1 ಲೀಟರ್ ಹಾಲಿಗೆ 14.50 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ನಮಗೆ ಇವರು ಕೊಡುತ್ತಿರುವುದಕ್ಕೂ ಮತ್ತು

ಮಾರಾಟ ಮಾಡುತ್ತಿರುವ ದರಕ್ಕೂ ಹೆಚ್ಚು ವ್ಯತ್ಯಾಸ ಇದೆ. ಸರಿಯಾಗಿ ಮಾರ್ಕೆಟ್ ಕೂಡ ಆಗುತ್ತಿಲ್ಲ. ಹಿಂದೆ ಇದೇ ಸದನದಲ್ಲಿ ಈ ವಿಷಯ ಚರ್ಚೆ ಆಗಿದೆ. ಬೇರೆ ಬೇರೆ ಕಡೆಯಿಂದ ಬೆಂಗಳೂರು ನಗರಕ್ಕೆ ಸುಮಾರು 5 ರಿಂದ 6 ಲಕ್ಷ ಲೀಟರ್ ಹಾಲು ಬಂದು ಇಲ್ಲಿ ಮಾರಾಟವಾಗುತ್ತಿದೆ. ಸಬ್ ಸ್ಟ್ಯಾಂಡರ್ಡ್‌ಗೂ ಹಾಳು ಎಂದು ಸಾಬೀತು ಆಗಿದ್ದರೂ ಸಹ ಸಂಬಂಧಪಟ್ಟವರನ್ನು ಹಿಡಿದು ಅವರ ಮೇಲೆ ಕೇಸ್ ಹಾಕತಕ್ಕಂಥದಾಗಲಿ ಅಥವಾ ಅವರ ಮೇಲೆ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ನಮ್ಮ ರಾಜ್ಯದಲ್ಲಿ ಉತ್ಪಾದನೆ ಆಗತಕ್ಕಂಥ ಹಾಲು ಮಾರ್ಕೆಟ್ ಆಗುತ್ತಿಲ್ಲ. ಆದ್ದರಿಂದ, ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ? ವಿಷಯುಕ್ತ ಹಾಲು ಬರುತ್ತಿದೆ ಎಂದು ಸುಮಾರು ಆರೇಳು ತಿಂಗಳ ಹಿಂದೆ ಇದೇ ಸದನದಲ್ಲಿ ಬಹಳ ದೊಡ್ಡ ಚರ್ಚೆಯಾಗಿತ್ತು. ಇವತ್ತೂ ಕೂಡ ಈರೋಡ್‌ನಿಂದ ಮತ್ತು ಇತರೇ ಭಾಗಗಳಿಂದ ಬೆಂಗಳೂರು ಮತ್ತು ಬೇರೆ ಬೇರೆ ಪಟ್ಟಣಗಳಿಗೆ ವಿಷಯುಕ್ತ ಹಾಲು ಸರಬರಾಜು ಆಗುತ್ತಿದೆ.

ಶ್ರೀ ಮಿರಾಜುದ್ದೀನ್ .ಎನ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬೇರೆ ಬೇರೆ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಸುಮಾರು 3 ರಿಂದ 3.5 ಲಕ್ಷ ಲೀಟರ್ ಹಾಲು ಬರುತ್ತಿದೆ. ಇದೇ ರೀತಿಯಾಗಿ ನಮ್ಮ ರಾಜ್ಯದಿಂದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳಿಗೆ ಸುಮಾರು 2.5 ರಿಂದ 3.00 ಲಕ್ಷ ಲೀಟರ್ ಹಾಲು ಹೋಗುತ್ತದೆ. ಒಂದು ಲೀಟರ್ ಹಾಲನ್ನು 13 ರಿಂದ 14 ರೂಪಾಯಿಗೆ ಮಾರಾಟ ಮಾಡುತ್ತಿದ್ದೀರಿ. ಆದರೆ, ರೈತರಿಂದ ಕಡಿಮೆ ದರದಲ್ಲಿ ತೆಗೆದುಕೊಳ್ಳುತ್ತಿದ್ದೀರಿ ಎನ್ನತಕ್ಕಂಥದ್ದು ಮಾನ್ಯ ಸದಸ್ಯರ ವಾದವಾಗಿದೆ. ಸುಮಾರು 7 ಲಕ್ಷ ಲೀಟರ್ ಹಾಲನ್ನು ಬೇರೆ ರಾಜ್ಯಗಳಿಗೆ ಟ್ರಾನ್ಸ್ ಪೋರ್ಟ್ ಮಾಡುತ್ತಿರುವುದರಿಂದ ಸುಮಾರು 15 ರಿಂದ 16 ಲಕ್ಷ ರೂಪಾಯಿ ನಮಗೆ ಲಾಸ್ ಆಗುತ್ತಿದೆ. ಈ ಲಾಸ್‌ನ್ನು ಕವರ್ ಮಾಡುವುದಕ್ಕೋಸ್ಕರ ಅಲ್ಲಿ ಒಂದು ಲೀಟರ್‌ಗೆ 30 ರಿಂದ 40 ಪೈಸೆ ಕಡಿಮೆ ಮಾಡಿದ್ದಾರೆ. ಮತ್ತೆ ಮಾರ್ಕೆಟ್ ಬದಲಾವಣೆಯಾದರೆ ಹಾಲಿನ ದರ ಕೂಡ ಬದಲಾವಣೆಯಾಗುತ್ತದೆ. ಇದೇನೂ ಪರ್ಮನೆಂಟ್ ರೇಟೇನೂ ಅಲ್ಲ. ಸಮಯ ನೋಡಿಕೊಂಡು ಹಾಲಿನ ದರವನ್ನು ಬೋರ್ಡ್‌ನಲ್ಲಿ ಬದಲಾವಣೆ ಮಾಡುತ್ತಾರೆ. ಹಾಲು ಉತ್ಪಾದಕರಿಗೆ ಇನ್ನು ಎಲ್ಲಿ ಬಾಕಿ ಕೊಡಬೇಕಾಗಿದೆಯೋ ಅಂಥ ಕಡೆ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಕಳಿಸಿ ಮಾತನಾಡಿ ಬಾಕಿ ಹಣವನ್ನು ಲಘುವಾಗಿ ಕೊಡುವಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ರೈತರಿಗೆ ದುಡ್ಡು ಯಾವಾಗ ಕೊಡುತ್ತೀರಿ ಎಂಬ ಪ್ರಶ್ನೆಗೆ ಇವರು ಸರಿಯಾದ ಉತ್ತರ ಕೊಡುತ್ತಿಲ್ಲ. ಹಾಲಿನ ಒಕ್ಕೂಟದವರು ರೈತರಿಗೆ ಹಾಲಿನ ಹಣವನ್ನು ಕೊಡದಿದ್ದರೆ ಆ ಒಕ್ಕೂಟವನ್ನು ಹಾಗೆ ಬಿಟ್ಟುಬಿಡುತ್ತೀರಾ? ನೀವು ಯಾರನ್ನೂ ಕೇಳುವುದಿಲ್ಲವೆ? ಸುಮ್ಮನೆ ಕೈ ಕಟ್ಟಿ ಕುಳಿತುಕೊಳ್ಳುತ್ತೀರಾ? ಹಾಗಾದರೆ ಸರ್ಕಾರದ ಉದ್ದೇಶ ಏನು ಎಂಬುದನ್ನು ಹೇಳಬೇಕು? ಹಾಲು ತೆಗೆದುಕೊಂಡು ವರ್ಷಾಗಟ್ಟಲೆ ಅವರಿಗೆ ದುಡ್ಡು ಕೊಡದಿದ್ದರೆ ಅವರ ಗತಿ ಏನಾಗಬೇಕು? ಇದರ ಬಗ್ಗೆ ಉತ್ತರ ಕೊಡುತ್ತಿಲ್ಲ. ಮತ್ತೆ ಹೊರಗಡೆಯಿಂದ ಕೆಲಬೆರಕೆ ಹಾಲು ಬರುತ್ತಿದೆ ಎಂದು ಮತ್ತು ಇದಕ್ಕೆ ಯೂರಿಯಾ ಹಾಗೂ ಮರಗೆಣಸು ಮಿಕ್ಸ್ ಆಗುತ್ತಿದೆ ಮತ್ತು ಇದಕ್ಕೆ ರಾಜಕಾರಣಿಗಳು ಮತ್ತು ಅಧಿಕಾರಿಗಳು ಶಾಮೀಲಾಗಿದ್ದಾರೆ. ಈ ರೀತಿಯಾದ ಹಾಲು ಈ ರೋಡ್‌ನಿಂದ ಹಾಲು ಬರುತ್ತಿದೆ.

ಅಧ್ಯಕ್ಷರು : ಕಟ್ಟಾ ಸುಬ್ರಮಣ್ಯ ನಾಯ್ಡುರವರೇ, ಇದರ ಬಗ್ಗೆ ಇಲ್ಲಿ ಚರ್ಚೆ ಆಗುತ್ತಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಚರ್ಚೆ ಅಲ್ಲ. ಆದರೆ, ನಾವು ಕೇಳಿರುವುದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕಲ್ಲವೆ? ಉತ್ತರ ಕೊಡದಿದ್ದರೆ ಹೇಗೆ?

ಅಧ್ಯಕ್ಷರು : ದಯವಿಟ್ಟು ಉಪ ಪ್ರಶ್ನೆಯನ್ನು ಕೇಳಿ. ಅದನ್ನು ಬಿಟ್ಟು ಅವರು, ಇವರು ಶಾಮೀಲಾಗಿದ್ದಾರೆ ಎನ್ನತಕ್ಕಂಥದ್ದು ಪ್ರಶ್ನೆಯೇ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಇದು ನಿಜವಾಗಿಯೂ ಕೂಡ ಶಾಮೀಲು ಆಗಿರತಕ್ಕಂಥ ವ್ಯಾಪಾರವಾಗಿದೆ. ಇದಕ್ಕೆ ನಿಮ್ಮ ಉತ್ತರವೇನು? ಅವರ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನತಕ್ಕಂಥದವನ್ನು ಮಾನ್ಯ ಸಚಿವರು ಹೇಳಬೇಕು.

ಅಧ್ಯಕ್ಷರು : ಉಪ ಪ್ರಶ್ನೆಯನ್ನು ತಾವು ನೇರವಾಗಿ ಮತ್ತು ಸ್ಪಷ್ಟವಾಗಿ ಕೇಳಿ? ಇದಕ್ಕೆ ಸರ್ಕಾರ ಉತ್ತರ ಕೊಡಬಾರದೆಂದು ನಾನು ಹೇಳುತ್ತಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸ್ಪಷ್ಟವಾದ ಉತ್ತರ ಕೊಡುತ್ತಿಲ್ಲ. ಕೊಡಬೇಕಾಗಿರತಕ್ಕಂಥ ಹಣವನ್ನು ಯಾವಾಗ ಕೊಡುತ್ತೀರಿ ಎಂಬುದನ್ನು ನಾನು ಈಗಾಗಲೇ ಕೇಳಿದ್ದೇನೆ. ಮತ್ತೆ ಮಧ್ಯಾಹ್ನದ ಬಿಸಿ ಊಟದ ಜೊತೆಗೆ ಹಾಲು ಕೊಡುತ್ತೇನೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಎಷ್ಟು ಹಾಲನ್ನು ಕೊಡುತ್ತಾರೆ? ಮತ್ತೆ ಇದಕ್ಕೆ ಎಷ್ಟು ಬಜೆಟ್ ಆಗುತ್ತದೆ? ಮತ್ತೆ ಇದನ್ನು ಯಾವಾಗಿನಿಂದ ಕೊಡುತ್ತಾರೆಂಬುದು ಮತ್ತು ಯಾವತ್ತಿನಿಂದ ಜಾರಿಗೆ ತರುತ್ತಾರೆಂಬುದನ್ನು ಹೇಳಬೇಕು. ಮಾನ್ಯ ಸಚಿವರು ಹೇಳಿರತಕ್ಕಂಥದ್ದಲ್ಲ. ಪೇಪರ್‌ನಲ್ಲೆಲ್ಲಾ ಸ್ಟೇಟ್‌ಮೆಂಟ್ ಬಂದಿದೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಸರ್ಪ್ಲೆಸ್ ಇರತಕ್ಕಂಥ ಹಾಲನ್ನು ಮಧ್ಯಾಹ್ನ ಊಟ ನೀಡುವಂಥ ಸಂದರ್ಭದಲ್ಲಿ ನೀಡಬೇಕೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಕೆ.ಎಂ.ಎಫ್.ನ ಎಂ.ಡಿ ಹಾಗೂ ನಮ್ಮ ಇಲಾಖೆಯ ಅಧಿಕಾರಿಗಳೆಲ್ಲರೂ ಸೇರಿಕೊಂಡು ಜಂಟಿಯಾಗಿ ಒಂದು ಸಭೆಯನ್ನು ಮಾಡಿದ್ದೆವು. ಸರ್ಪ್ಲೆಸ್ ಆಗಿರತಕ್ಕಂಥ ಹಾಲನ್ನು ಅಂಗನವಾಡಿ ಮಕ್ಕಳಿಗೆ ಕೊಡುವುದರಿಂದ ಸ್ವಲ್ಪ ಮಟ್ಟಿಗೆ ಕಂಟ್ರೋಲ್ ಆಗುತ್ತದೆ ಎಂಬುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಈಗಾಗಲೇ ಒಂದು ಸಭೆಯನ್ನು ಮಾಡಿದ್ದೇವೆ. ಮತ್ತೊಂದು ಸಲ ಕುಳಿತು ಇದರ ಬಗ್ಗೆ ಚರ್ಚೆ ಮಾಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಈ ವಿಷಯ ಇನ್ನೂ ಅವರ ಮುಂದೆ ಚರ್ಚೆಯಲ್ಲಿದೆ. ಅವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆಯೋ ಅದನ್ನು ತೆಗೆದುಕೊಳ್ಳಲಿ. ಕಳಪೆ ಹಾಲಿನ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥದನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. 2001–2002ನೇ ಇಸವಿಯಲ್ಲಿ ಕಳಪೆ ಹಾಲನ್ನು ಸರಬರಾಜು ಮಾಡುತ್ತಿದ್ದ 126 ಕೇಸ್‌ನ್ನು ಕಾರ್ಪೊರೇಷನ್‌ರವರು ದಾಖಲು ಮಾಡಿದ್ದಾರೆ. 2003–2004ನೇ ಸಾಲಿನಲ್ಲಿ ಕೇವಲ 2 ಕೇಸ್‌ನ್ನು ಬುಕ್ ಮಾಡಿದ್ದಾರೆ. ತಮಗೇನು ರೈತರ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಕೂಡ ಇದೆ. ರೈತರಿಗೆ ಮೋಸ ಮಾಡಬೇಕು ಎಂಬ ಇಷ್ಟ ನಮಗೇನೂ ಇಲ್ಲ. ಸರ್ಪ್ಲೆಸ್ ಆಗತಕ್ಕಂಥ ಹಾಲನ್ನು ಬೇರೆ ರಾಜ್ಯಗಳಿಗೆ

ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೋಸ್ಕರ ಬೆಂಗಳೂರಿನ ಕೆ.ಎಂ.ಎಫ್.ಗೆ ಪ್ರತಿ ದಿನ ಸುಮಾರು 15 ರಿಂದ 16 ಲಕ್ಷ ರೂಪಾಯಿ ಲಾಸ್ ಆಗುತ್ತಿದೆ. ರೈತರಿಗೆ ಕೊಡಬೇಕಾಗಿರತಕ್ಕಂಥ ಹಾಲಿನ ಹಣವನ್ನು ಇನ್ನು ಎರಡು ವಾರದಲ್ಲಿ ಪೇಮೆಂಟ್ ಮಾಡಿಸತಕ್ಕಂಥ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಇವತ್ತಿನ ದಿವಸ ಈರೋಡ್‌ನಿಂದ ಬರತಕ್ಕಂಥ ಹಾಲು ಅಧಿಕಾರಿಗಳ ಜೊತೆಯಲ್ಲಿಯೇ ಬೆಂಗಳೂರು, ಮಂಗಳೂರು ಮತ್ತು ಮೈಸೂರು ಮತ್ತು ಇತರೇ ಎಲ್ಲಾ ಕಡೆ ಹೋಗುತ್ತಿದೆ. ಆದ್ದರಿಂದ ಈರೋಡ್‌ನಿಂದ ಬರುತ್ತಿರುವ ಕಲಬೆರಕೆ ಹಾಲನ್ನು ಇಲ್ಲಿಗೆ ಬರದಂತೆ ತಡೆಗಟ್ಟುವುದಕ್ಕೆ ತಾವೇನಾದರೂ ಪ್ರಯತ್ನ ಮಾಡುತ್ತೀರಾ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಪುತ್ತೂರು ತಾಲ್ಲೂಕಿನಲ್ಲಿ ಪಶುವೈದ್ಯಕೀಯ ಸೇವಾ ವ್ಯವಸ್ಥೆ

24 (124) : ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕ್ ಪ್ರದೇಶದಲ್ಲಿರುವ ಪಶು ವೈದ್ಯಕೀಯ ಆಸ್ಪತ್ರೆಗಳು ಹಾಗೂ ಪಶು ವೈದ್ಯಕೀಯ ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು ಹಾಗೂ ಅವುಗಳಲ್ಲಿ ನಿಗದಿತ ಸಿಬ್ಬಂದಿ ವರ್ಗದವರು ಇರುವರೇ;

ಆ) ಸಂಚಾರಿ ಪಶು ವೈದ್ಯಕೀಯ ಸೇವೆಯು ಜಾಲನೆಯಲ್ಲಿದೆಯೇ; ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು ಹಾಗೂ ಈ ಕುರಿತಂತೆ ಸೂಕ್ತ ವ್ಯವಸ್ಥೆಯನ್ನು ಮಾಡಲಾಗುವುದೇ;

ಇ) ಹಾಲಿ ಇರುವ ಪಶುವೈದ್ಯ ಚಿಕಿತ್ಸಾಲಯಗಳಲ್ಲಿ ಎಷ್ಟು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸಿ ಅನುಕೂಲ ಮಾಡಿಕೊಡಲು ಸರ್ಕಾರ ಉದ್ದೇಶಿಸಿದೆ. ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು.

ಈ) ಪುತ್ತೂರು ತಾಲ್ಲೂಕಿನ ಕೊಯ್ಲಾ ಪಶು ಸಂಗೋಪನಾ ಕೇಂದ್ರಕ್ಕೆ ಒಟ್ಟು ಎಷ್ಟು ಜಾಗವಿದೆ ಹಾಗೂ ಆ ಜಾಗದಲ್ಲಿ ಪಶುಗಳಿಗೆ ಮೇವು ದೊರೆಯುವುದೇ;

ಉ) ಕೊಯ್ಲಾ ಪಶುಸಂಗೋಪನೆ ಕೇಂದ್ರದಲ್ಲಿ ಎಷ್ಟು ಜಾನುವಾರಗಳಿಗೆ ಹಾಗೂ ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಪಶು ಆಸ್ಪತೆಗಳು–1

ಪಶು ಚಿಕಿತ್ಸಾಲಯ –5

ಮಂಜೂರು ಆಗಿರುವ ಎಲ್ಲಾ ಹುದ್ದೆಗಳು ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿರುವುದಿಲ್ಲ, ಮಂಜೂರಾಗಿರುವ, ಭರ್ತಿಯಾಗಿರುವ ಹಾಗಿ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

ಕ್ರ. ಸಂ.	ಹುದ್ದೆಯ ಪದನಾಮ	ಮಂಜೂರು	ಭರ್ತಿ	ಖಾಲಿ
1	ಸಹಾಯಕ ನಿರ್ದೇಶಕರು	1	1	–
2	ಪಶು ವೈದ್ಯಾಧಿಕಾರಿ	7	5	2